**2 ನೇ ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಥಣಿ**

**ಉಪಸ್ಥಿತರು**

ಶ್ರೀ ಕೆ. ಗೋಪಾಲ ಕೃಷ್ಣ, ಬಿ.ಎ.ಎಲ್.ಎಲ್.ಬಿ.

2 ನೇ ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾ. ದ.

**ದಿನಾಂಕ: 19 ನೇ ಜುಲೈ ಮಾಹೆ 2019**

**<u>ಮೂಲ ದಾವಾ ಸಂಖ್ಯೆ 743/2012</u>**

**ವಾದಿ/ಗಳು** : ಶ್ರೀ. ವಿದ್ಯಾಲಕ್ಷ್ಮೀ ಎಜ್ಯುಕೇಶನ್ ಸೊಸೈಟಿ, ಸಂಬರಗಿ
ತಾಲ್ಲೂಕುಃ ಅಥಣಿ ಜೀಃ ಬೆಳಗಾವಿ
ಪ್ರತಿನಿಧಿಸುವವರು, ಶ್ರೀ ಗೋಪಾಲ ತಂ.ಚೋಕಾ ಕಾಂಬಳೆ
ವಯಾಃ 43 ವರ್ಷ, ಉದ್ಯೋಗಃ ವ್ಯವಸಾಯ
ಸಾಕೀನಃ ಸಂಬರಗಿ, ತಾಃ ಅಥಣಿ ಜೀಃ ಬೆಳಗಾವಿ

**-ವಿರುದ್ಧ -**

**ಪ್ರತಿವಾದಿಗಳು** : 1. ಶ್ರೀ ಅಪ್ಪಾಸಾಬ ಮಾರುತಿ ದೇವಮಾನೆ
ವಯಾಃ 54 ವರ್ಷ, ಉದ್ಯೋಗಃ ವ್ಯವಸಾಯ
ಸಾಕೀನಃ ಸಂಬರಗಿ, ತಾಃ ಅಥಣಿ, ಜೀಃ ಬೆಳಗಾವಿ

2. ಶ್ರೀ ಶಂಕರ ಸದಾಶಿವ ರಾಜಮಾನೆ
ವಯಾಃ 46 ವರ್ಷ, ಉದ್ಯೋಗಃ ವ್ಯವಸಾಯ
ಸಾಕೀನಃ ಸಂಬರಗಿ, ತಾಃ ಅಥಣಿ, ಜೀಃ ಬೆಳಗಾವಿ

3. ಶ್ರೀ ಲಿಂಬಾಜಿ ಶಂಕರ ದೇವಮಾನೆ
ವಯಾಃ 41 ವರ್ಷ, ಉದ್ಯೋಗಃ ವ್ಯವಸಾಯ
ಸಾಕೀನಃ ಸಂಬರಗಿ, ತಾಃ ಅಥಣಿ, ಜೀಃ ಬೆಳಗಾವಿ

4. ಶ್ರೀ ಪಾಂಡುರಂಗ ಜ್ಞಾನು ಕಾಂಬಳೆ
ವಯಾಃ 44 ವರ್ಷ, ಉದ್ಯೋಗಃ ವ್ಯವಸಾಯ
ಸಾಕೀನಃ ಸಂಬರಗಿ, ತಾಃ ಅಥಣಿ, ಜೀಃ ಬೆಳಗಾವಿ

5. ಶ್ರೀ ಸುಖದೇವ ನಾಮದೇವ ಕಂಟೆಕರ
ವಯಾಃ 38 ವರ್ಷ, ಉದ್ಯೋಗಃ ವ್ಯವಸಾಯ
ಸಾಕೀನಃ ಸಂಬರಗಿ, ತಾಃ ಅಥಣಿ, ಜಿಃ ಬೆಳಗಾವಿ

6. ಶ್ರೀ ಮಹಾದೇವ ಗುರಪ್ಪಾ ರಾವಳಗುಂದತ್ತಿ
ವಯಾಃ 52 ವರ್ಷ, ಉದ್ಯೋಗಃ ವ್ಯವಸಾಯ
ಸಾಕೀನಃ ಸಂಬರಗಿ, ತಾಃ ಅಥಣಿ, ಜಿಃ ಬೆಳಗಾವಿ

7. ಶ್ರೀ ಶಂಕರ ಸದಾಶಿವ ರಾಜಮಾನೆ
ವಯಾಃ 35 ವರ್ಷ, ಉದ್ಯೋಗಃ ವ್ಯವಸಾಯ
ಸಾಕೀನಃ ಸಂಬರಗಿ, ತಾಃ ಅಥಣಿ, ಜಿಃ ಬೆಳಗಾವಿ

8. ಕರ್ನಾಟಕ ರಾಜ್ಯ,
ಜಿಲ್ಲಾಧಿಕಾರಿಗಳು, ಬೆಳಗಾವಿ, ತಾಃಜಿಃ ಬೆಳಗಾವಿ

9. ಸಂಘಗಳ ನೊಂದಣಾಧಿಕಾರಿಗಳು,
ಜಿಲ್ಲಾ ಸಹಕಾರಿ ಸಂಘಗಳ ನೊಂದಣಾಧಿಕಾರಿಗಳು,
ಕ್ಯಾಂಪ ಎರಿಯಾ, ಬೆಳಗಾವಿ ತಾಃಜಿಃ ಬೆಳಗಾವಿ

ಃಮಧ್ಯಂತರ ಅರ್ಜಿ 2ರ ಪಕ್ಷಕಾರರುಃ

ಅರ್ಜಿದಾರರು/ ಃ ಶ್ರೀ. ವಿದ್ಯಾಲಕ್ಷ್ಮೀ ಎಜ್ಯುಕೇಶನ್ ಸೊಸೈಟಿ, ಸಂಬರಗಿ
ವಾದಿಯರು ತಾಲ್ಲೂಕುಃ ಅಥಣಿ ಜಿಃ ಬೆಳಗಾವಿ

( ಶ್ರೀ ಆರ್ ಎನ್ ಸಿದ್ದಾಂತಿ ವಕೀಲರು)

ವಿರುದ್ಧ

ಎದುರುದಾರರು/ ಃ ಶ್ರೀ ಅಪ್ಪಾಸಾಬ ಮಾರುತಿ ದೇವಮಾನೆ ಮತ್ತು ಇತರರು
/ಪ್ರತಿವಾದಿಗಳು

(ಪ್ರತಿವಾದಿ ನಂ. 1 ರಿಂದ 4 ಶ್ರೀ ಎಸ್ ಎಸ್ ಸಂಗೊರಾಮ ವಕೀಲರು ಪ್ರತಿವಾದಿ ನಂ. 5 ರಿಂದ 6 ಶ್ರೀ ಬಿ ಎಸ್ ಕೂಡವಕ್ಕಲಗಿ ವಕೀಲರು ಪ್ರತಿವಾದಿ ನಂ. 8 ರಿಂದ 9 ಶ್ರೀ ಎ ಜಿ ಪಿ ವಕೀಲರು)

**ವಾದಿಯು ಮಧ್ಯಂತರ ಅರ್ಜಿ ಸಿಪಿಸಿ ಆದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಅರ್ಜಿ ಮೇಲಿನ ಆದೇಶಃ**

ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಅರ್ಜಿದಾರರು/ವಾದಿಯರು ಪ್ರತಿವಾದಿ ಸಂಖ್ಯೆ 1 ರಿಂದ 7 ರವರು ದಾವಾ ಆಸ್ತಿ ವಿದ್ಯಾಲಕ್ಷ್ಮೀ ಶಿಕ್ಷಣ ಸಂಸ್ಥೆ ಸಂಬರಗಿ ,ಅಥಣಿ ತಾಲ್ಲೂಕು. ಸಂಸ್ಥೆಯ ಆಡಳಿತದಲ್ಲಿ ಯಾವುದೇ ರೀತಿ ತಂಟೆ ತಕರಾರು ಮಾಡಬಾರದೆಂದು ತಾತ್ಕಾಲಿಕ ನಿರ್ಭಂಕಾಜ್ಞೆಯನ್ನು ಕೋರಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ವಾದಿಯರ/ಅರ್ಜಿದಾರರು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಭಂದಕಾಜ್ಞೆಯ ಆದೇಶವನ್ನು ಕೋರಿ ಸಲ್ಲಿಸಿರುತ್ತಾರೆ.

3. ಈ ಮಧ್ಯಂತರ ಅರ್ಜಿ ಜೊತೆಗೆ ಲಗತ್ತು ಪಡಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಶ್ರೀ ಗೋಪಾಲ ಬೀನ್ ಚೋಕಾ ಕಾಂಬಳೆ ರವರು ಸಂಘದ ಕಾನೂನು ಪ್ರತಿನಿಧಿ ಆಗಿದ್ದು ಸದರಿ ಸಂಘದ ಕಾರ್ಯದರ್ಶಿ ಆಗಿರುತ್ತಾರೆ. ಇವರು ತಿಳಿಸುತ್ತಾ ವಾದಿ ಸಂಘವು ಶ್ರೀ ವಿದ್ಯಾಲಕ್ಷ್ಮೀ ವಿದ್ಯಾಸಂಸ್ಥೆ ಸಂಬರಗಿ,ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆಯಿಂದ ಕರ್ನಾಟಕ ಸಂಘಗಳ ನೊಂದಣಿ ಅಧಿನಿಯಮದಂತೆ ದಿನಾಂಕಃ07-02-1992 ರಂದು ಬೆಳಗಾವಿನಲ್ಲಿ ನೊಂದಣಿ ಆಗಿರುತ್ತದೆ. ಸದರಿ ಸಂಸ್ಥೆಯಲ್ಲಿ ಅಧ್ಯಕ್ಷರು ಮತ್ತು ಸದಸ್ಯರು ಸೇರಿ 40 ಜನರ ಸದಸ್ಯರಿರುತ್ತಾರೆ. ಸದರಿ ಸಂಘದ ಮುಖ್ಯವಾದ ಉದ್ದೇಶ ಎನೆಂದರೆ ವಿದ್ಯಾರ್ಥಿಗಳಿಗೆ ವಿಜ್ಞಾನ, ಕಲೆ, ಸಾಹಿತ್ಯದ ಬಗ್ಗೆ ಎಲ್ಲ ರೀತಿಯ ವಿದ್ಯಾಭ್ಯಾಸವನ್ನು ಬಡ ವಿದ್ಯಾರ್ಥಿಗಳಿಗೆ ನೀಡುವ ಉದ್ದೇಶವನ್ನು ಹೊಂದಿರುತ್ತದೆ. ಈ ದಾವೆಯ 1 ರಿಂದ 3 ಹಾಗೂ ಪ್ರತಿವಾದಿ ನಂ.7 ರವರು ಸಂಘದ ನಿರ್ದೇಶಕರು ಆಡಳಿತ ಮಂಡಳಿಯ ನಿರ್ದೇಶಕರು ಆಗಿರುತ್ತಾರೆ. ಪ್ರತಿವಾದಿ ನಂ. 4 ರವರು ಸದರಿ ಸಂಘದ ಅಧ್ಯಕ್ಷ ಆಗಿರುವುದಾಗಿ ಪ್ರತಿವಾದಿ ಮಾಡಿರುತ್ತಾರೆ. ಪ್ರತಿವಾದಿ 5 ರವರು ಸಂಬರಗಿ ನಲ್ಲಿರುವ ಸಂಘ ಮಿತ್ರ ಪದವಿ ಕಾಲೇಜಿನ ಕನ್ನಡ ಉಪನ್ಯಾಸಕಾರಾಗಿರುತ್ತಾರೆ. ಮತ್ತು ಪ್ರತಿವಾದಿ 6 ರವರು ಸದರಿ ಸಂಘ ಮಿತ್ರ ಪದವಿ ಕಾಲೇಜಿನ ಅರೇಕಾಲಿಕ ಗ್ರಂಥ ಪಾಲಕರಾಗಿ ಕೆಲಸ ನಿರ್ವಹಿಸುತಿ2 ರುತ್ತಾರೆ. ಮತ್ತು 8 ನೇ ಪ್ರತಿವಾದಿಯ ರಾಜ್ಯಸರ್ಕಾರದ್ದು ಮತ್ತು 9 ನೇ ಪ್ರತಿವಾದಿಯು ಸಹಾಕಾರಿ ಸಂಘಗಳ ನೊಂದಣಿ ಅಧಿಕಾರಿಗಳಾಗಿರುತ್ತಾರೆ.

4. ಸದರಿ ವಾದಿ ಸಂಘವು ಸಂಘ ಮಿತ್ರ ಪ್ರೌಢ ಶಾಲೆಯಲ್ಲಿ ಮತ್ತು ಸಂಘ ಮಿತ್ರ ಪದವಿ ಪೂರ್ವ ಕಾಲೇಜು ಮತ್ತು ಸಂಬರಗಿಯಲ್ಲಿ ನಡೆಸುತ್ತಿದ್ದು ವಾದಿ ಸಂಘದಲ್ಲಿ 7 ಜನ ಸದಸ್ಯರು ಇದ್ದು ಇದರಲ್ಲಿ ಒಬ್ಬರು ಅಧ್ಯಕ್ಷ 2.ಉಪಾಧ್ಯಕ್ಷರು 3.ಕಾರ್ಯದರ್ಶಿ 4.ಜನರು ಆಡಳಿತ ವರ್ಗದ ನಿರ್ದೇಶಕರು ಆಗಿರುತ್ತಾರೆ. ಮತ್ತು ಇವರ ಕಾಲಾವಧಿ 3 ವರ್ಷ ಆಗಿರುತ್ತದೆ. ಸದರಿ ವಾದಿಯ ಸಂಘವು ಸಂಘದ ಬಯಲಾವನ್ನು ದಿನಾಂಕಃ 15-07-2005 ರಂದು ಅಳವಡಿಸಿಕೊಂಡಿದ್ದು ಮತ್ತು 2005-06 ರಿಂದ 2007-08 ರವರೆಗೆ ಹೊಸ ಸಂಘದ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಅದರಂತೆ 1. ಶ್ರೀಮತಿಃ ಶನಿಬಾಯಿ ಅಧ್ಯಕ್ಷರಾಗಿ 2. ಶ್ರೀ ನಾಮದೇವ ಲಕ್ಕಪ್ಪಾ ಕಾಂಬಳೆ ಉಪಾಧ್ಯಕ್ಷರಾಗಿ ಮತ್ತು ಅರ್ಜಿದಾರ ಗೋಪಾಲ ರವರು ಕಾರ್ಯದರ್ಶಿಯಾಗಿ ಮತ್ತು ಶ್ರೀ ನಾರಾಯಣ ಸಿದ್ದು ಕಾಂಬಳೆ, ಪಾಂಡುರಂಗ ಜಾನು ಕಾಂಬಳೆ, ಶೋಭಾ ಗಂಗಾರಾಮ ಕಾಂಬಳೆ, ಯಲ್ಲವ್ವ ಪ್ರಭು ಕಾಂಬಳೆ, 2008-09 ರಿಂದ 2010-11 ರವರೆಗೆ ಅಂದರೆ ಇಂದಿನವರೆಗೆ ನಿರ್ದೇಶಕರು ಆಗಿರುತ್ತಾರೆ.

5. ವಾದಿಯ ಸಂಘವನ್ನು ಅನಂತರ ಬೆಳಗಾವಿ ಹತ್ತಿರ ಸಂಘದ ನೊಂದಣಿ ಅಧಿಕಾರಿಗಳ ಬಳಿ ಸಂಘವನ್ನು ಪುನರ್ ನೊಂದಣಿ ಮಾಡಿಸುವ ಉದ್ದೇಶವನ್ನು ಹೊಂದಿದ್ದು ಪ್ರತಿವಾದಿ 1 ರಿಂದ 6 ರವರು ಅದನ್ನು ದುರುಪಯೋಗ ಪಡಿಸಿಕೊಂಡು ಮತ್ತು ಇತರ ಕಾರ್ಯಕಾರಿ ಮಂಡಳಿಯ ಸದಸ್ಯರ ಆಜ್ಞಾನವನ್ನು ದುರುಪಯೋಗ ಪಡಿಸಿಕೊಂಡು ಅವುಗಳ ಹೆಸರನ್ನು ಖಾಲಿ ಪತ್ರಗಳನ್ನು ಪಡೆದು ಕೊಂಡು ಕಾರ್ಯದರ್ಶಿ ಮತ್ತು ಅಧ್ಯಕ್ಷೀಯ ಮಂಡಳಿಯ ಅಂಶಗಳನ್ನು ಪ್ರತಿವಾದಿ 1 ರಿಂದ 7 ಶರಿಕ್ಕಾಗಿ ಮತ್ತು ಸಂಘದ ರೆಗ್ಯೂಲೇಶನ ತಿದ್ದುಪಡಿ ಮಾಡಿ ಸಂಘದ ಅಧ್ಯಕ್ಯರನ್ನು ಯಾವುದೇ ಸಭೆಗೆ ಕರೆಯದೇ ಕೆಲವೊಂದು ದಾಖಲೆಗಳನ್ನು ಸೃಷ್ಟಿಸಿಕೊಂಡು ಬೆಳಗಾವಿನ ಸಹಾಯಕರು ಸಂಘದಲ್ಲಿಯ ಸಂಘವನ್ನು ಮರು ನೊಂದಣಿ ಮಾಡಿರುತ್ತಾರೆ. ಸದರಿ ನೊಂದಣಿ ಆದೇಶಗಳು ಡಿಎಲ್ಆರ್ಃಎಸ್ಎಸ್ಃ144/91-92/2009-10 ದಿನಾಂಕಃ 11-11-2009 ಎಂದು ವಾದಿಯು ಸಂಘದಲ್ಲಿ ಕೆಲವೊಂದು ತಿದ್ದುಪಡಿ ಮಾಡಿರುತ್ತಾರೆ. ಸಂಘದ ಸದಸ್ಯರ ಗಮನಕ್ಕೂ ತರದೇ ಕಾರ್ಯಕಾರಿ ಸದಸ್ಯರ ಗಮನಕ್ಕೂ ತರದೇ ಕಾನೂನು ಬಾಹಿರವಾಗಿ ಬಯಲಾದ ನಿಯಮ 15 ನೇ ತಿದ್ದುಪಡಿ ಮಾಡಿರುತ್ತಾರೆ.

6. ಸದರಿ ವಾದ ಪತ್ರದಲ್ಲಿ ತಿಳಿಸುತ್ತಾ 15 ನೇ ಸಂಘದ ತಿದ್ದುಪಡಿ ಮಾಡಿ ಸದರಿ ಸಂಘದ ಕಾರ್ಯಕಾರಿ ಮಂಡಳಿಗೆ ಇಬ್ಬರ ಹೊಸ ಸದಸ್ಯರಾದ ಹೆಚ್ಚುವರಿ ನೇಮಕ ಮಾಡಿಕೊಂಡು ಪ್ರತಿವಾದಿ 1

ರಿಂದ 3 ಈ ರೀತಿ ಅಕ್ರಮವಾಗಿ ನೇಮಕಾತಿ ಆದಕಾರಣ ಅವರ ನೇಮಕಾತಿಯು ಅಕ್ರಮವಾಗಿ ಆಗಿರುತ್ತದೆ . ದಿನಾಂಕಃ02-10-2011 ರಂದು ವಾದಿ ಸಂಘದ ಕಾರ್ಯಕಾರಿ ಮಂಡಳಿಯ ಸದಸ್ಯರಾದ ಶ್ರೀಮತಿ ಶನಿಬಾಯಿ ಕೊಂ ನಾಮದೇವ ಕಾಂಬಳೆ ಇವರು ಮೃತಪಟ್ಟಿದ್ದು ಸಂಘದ ಸದಸ್ಯರು ಎಲ್ಲಾ ಮಾತುಕತೆ ಆಗಿ ಶ್ರೀ ಅಕಾರಾಮ ಕೋಕಾ ಅವರನ್ನು ಕಾರ್ಯಕಾರಿ ಸಮಿತಿಯ ನಿರ್ದೇಶಕರಾಗಿ ಹೆಚ್ಚುವರಿ ಸೇರ್ಪಡೆ ಮಾಡಿಕೊಳ್ಳಲು ಮಾತುಕತೆ ಆಗಿದ್ದು ಪ್ರತಿವಾದಿ 1 ರಿಂದ 7 ರವರು ಮೃತ ವ್ಯಕ್ತಿಯ ಶನಿಬಾಯಿ ಮೃತಪಟ್ಟಿದನ್ನು ದುರುಪಯೋಗ ಪಡಿಸಿಕೊಂಡು ಕೆಲವು ನಕಲಿ ಸಹಿಗಳನ್ನು ಸೃಷ್ಟಿಸಿಕೊಂಡು ಶ್ರೀ ಶಂಕರ ಸದಾಶಿವ ರಾಜಮಾನೆ ಇವರನ್ನು ಸಂಘಕ್ಕೆ ಸೇರ್ಪಡೆ ಮಾಡಿ ಕೊಂಡಿರುವುದಾಗಿ ಬೆಳಗಾವಿ ಸಹಕಾರಿ ಸಂಘಗಳ ನೊಂದಣಿ ಕಛೇರಿಗೆ ಸಲ್ಲಿಸಿರುತ್ತಾರೆ. ಆದ್ದರಿಂದ ಶ್ರೀಮತಿಃ ಶನಿಬಾಯಿ ನಾಮದೇವ ಕಾಂಬಳೆ ಅವರು ಸಂಘದ ಸದಸ್ಯರು ಆಗಿರುವುದಿಲ್ಲ. ಆದ್ದರಿಂದ ಇವರನ್ನು ಅಕ್ರಮವಾಗಿ ನೇಮಕ ಮಾಡಿದ್ದರಿಂದ ಅವರ ಸದಸ್ಯತ್ವ ಊರ್ಜಿತವಾಗುವುದಿಲ್ಲ ದಿನಾಂಕಃ25-10-201 ರಂದು ಪ್ರತಿವಾದಿ 1 ರಿಂದ 7 ರವರು ಷರಿಕ್ಕಾಗಿ ವಾದಿ ಸಂಘಕ್ಕೆ ನಷ್ಟ ಉಂಟು ಮಾಡುವ ಉದ್ದೇಶದಿಂದ ಅವರು ಸಂಘದ ಲೇಟರ ಪ್ಯಾಡ್ ಸೃಷ್ಟಿಸಿರುತ್ತಾರೆ. ಹಾಗೂ ಶ್ರೀ ಸಿದ್ಧ ಕಲಾ ಗ್ರಾಮೀಣ ಅಭಿವೃದ್ದಿ ಕೇಂದ್ರ ಪ್ಲಾಟ ನಂ.14 ರಾಣಿ ಚೆನ್ನಮ್ಮಾ ನಗರ ಬೆಳಗಾವಿ ಇಲ್ಲಿ ಸಭೆ ಕರೆದು ಹೊಸ ರೆಗ್ಯೂಲೇಶನ್ ನಂ.3 ಮಾಡಿ ವಾದಿಯು ಸಂಘದ ಸದಸ್ಯರ ಅನುಪ ಸ್ಥಿತಿಯಲ್ಲಿ ಹೊಸ ಕಾರ್ಯಕಾರಿ ಮಂಡಳಿಯನ್ನು ಮಾಡಿರುತ್ತಾರೆ. ಅದರಂತೆ ಶ್ರೀ ಪಾಂಡುರಂಗ ಜ್ಞಾನು ಕಾಂಬಳೆ ಅಧ್ಯಕ್ಷರಾಗಿ 2. ನಾರಾಯಣ ಸಿದ್ದಪ್ಪ ಕಾಂಬಳೆ ಉಪಾಧ್ಯಕ್ಷರಾಗಿ, 3. ಅಪ್ಪಾಸಾಬ ಮಾರುತಿ ದೇವಮಾನೆ ಕಾರ್ಯದರ್ಶಿಯಗಿ ಈ ಅರ್ಜಿಯ ಅರ್ಜಿದಾರರನ್ನು ನಿರ್ದೇಶಕರನ್ನಾಗಿ ಮತ್ತು ಮಹಾದೇವ ಲಕ್ಕಪ್ಪಾ ಕಾಂಬಳೆ, ಶೋಭಾ ಗಂಗಾರಾಮ ಕಾಂಬಳೆ, ಯಲ್ಲವ್ವಾ ಪ್ರಭು ಕಾಂಬಳೆ, ಲಿಂಬಾಗಿ ಶಂಕರ ದೇವಮಾನೆ, ಶಂಕರ ಸದಾಶಿವ ರಾಜಮಾನೆ ಇವರುಗಳು ಕಾರ್ಯಕಾರಿ ಮಂಡಳಿಯ ನಿರ್ದೇಶಕರನ್ನಾಗಿ ಮಾಡಿರುತ್ತಾರೆ. ಮತ್ತು ಸದರಿಯವರನ್ನು ಸಹಕಾರಿ ಸಂಘಗಳ ಕಾಯ್ದೆ ಅಡಿಯಲ್ಲಿ ಸಹಕಾರಿ ಸಂಘಗಳ ಅಧಿಕಾರಿಗಳ ಕಛೇರಿಯಲ್ಲಿ ಹೊಸ ನಿಯಮಾವಳಿ ದಿನಾಂಕಃ 25-10-2011 ಎಂದು ಸಂಘವನ್ನು ಸಿದ್ದ ಕಲಾ ಗ್ರಾಮೀಣ ಅಭಿವೃದ್ಧಿ ಕೇಂದ್ರ ಪ್ಲಾಟಂ ನಂ.14 ರಾಣಿ ಚೆನ್ನಮ್ಮಾ ನಗರ ಬೆಳಗಾವಿ ಕಛೇರಿ ವಿಳಾಸ ತೋರಿಸಿರುತ್ತಾರೆ.

7. ಪ್ರತಿವಾದಿ 1 ರಿಂದ 7 ತೋರಿಸಿರುವ ಕೆಳಕಂಡ ವಿಳಾಸಕ್ಕೂ ಮತ್ತು ವಾದಿ ಸಂಘವನ್ನು ಯಾವುದೇ ರೀತಿಯ ಸಂಬಂಧ ಇರುವುದಿಲ್ಲ. ಈ ಬಗ್ಗೆ 1 ರಿಂದ ಪ್ರತಿವಾದಿಗಳು ಸುಳ್ಳು

ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಮತ್ತು ಸಂಘಕ್ಕೆ ಹೊಸದಾದ ನಿಯಮಾವಳಿಗಳನ್ನು ರೂಪಿಸಿದ್ದು ಅವು ಕಾನೂನಿಗೆ ವಿರುದ್ಧ ಆಗಿರುತ್ತದೆ. ಮತ್ತು 1 ರಿಂದ 7 ರವರು ಷರಿಕ್ಕಾಗಿ 2010-11 ರ ಸಾಲಿನಲ್ಲಿ ಸಂಘಕ್ಕೆ ಸಂಬಂಧಿಸಿದಂತೆ ಕೆಲವೊಂದು ರಶೀಧಿಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಹಾಗೂ ದಿನಾಂಕಃ 28-05-2012 ರಂದು ದಾಖಲೆಗಳನ್ನು ಲೆಕ್ಕ ಪರಿಶೋಧನೆ ಮಾಡಲು ಕರೆದು ಸದರಿ ವಿಚಾರ ಕಾನೂನು ಬಾಹಿರ ಆಗಿರುತ್ತದೆ. ದಿನಾಂಕಃ 08-02-2012 ರಂದು ಕಾರ್ಯದರ್ಶಿ ಮತ್ತು ಅಧ್ಯಕ್ಷರು 1 ರಿಂದ 7 ನೇ ಪ್ರತಿವಾದಿಗಳಿಂದ ಮೋಸ ಮಾಡಿರುವ ಬಗ್ಗೆ ಮಾಹಿತಿ ಪಡೆದು ಸದರಿ ವಿಚಾರಗಳನ್ನು ದಿನಾಂಕಃ 10-02-2012 ರಂದು ಸಹಕಾರಿ ಸಂಘಗಳ ನೊಂದಣಿ ಅಧಿಕಾರಿಗಳು ಬೆಳಗಾವಿ ಇವರಿಗೆ ಸದರಿ ವಿಚಾರವಾದ ಅರ್ಜಿಯನ್ನು ಸಹಾ ಸಲ್ಲಿಸಿರುತ್ತಾರೆ. ಹಾಗೂ ಪ್ರತಿವಾದಿ 9 ರವರು ದಿನಾಂಕಃ 02-03-2012 ರಂದು ವಾದಿಯರು ಅರ್ಜಿ ನೀಡಿದರೂ ಸಹಾ ವಾದಿ ಸಂಘದ ಪರವಾಗಿ ದಿನಾಂಕಃ 10-02-2012 ರಂದು ಆದೇಶ ಸಂಖ್ಯೆಃ ಡಿಎಲ್ಆರ್/ಎಸ್ಆರ್/ವಿಎಲ್ಎರ್/11-12/13-42 ಎಂದು ಆದೇಶ ಮಾಡಿ ಕಾರ್ಯಕಾರಿ ಮಂಡಳಿಯ ಸದಸ್ಯರು ವಿವಾದವನ್ನು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಸೂಚಿಸಿರುತ್ತಾರೆ. ಪ್ರತಿವಾದಿ 1 ರಿಂದ 4 ರವರು ಆ ವಾದಿ ಸಂಘದ ಆಯ್ಕೆ ಆದ ಸದಸ್ಯರು ಆಗಿರುವುದಿಲ್ಲ. ಹಾಗೂ ವಾದಿ ಸಂಘದ ಸದಸ್ಯರಾಗಿರುವುದಿಲ್ಲ ಮತ್ತು ಪ್ರತಿವಾದಿ 1 ರಿಂದ 7 ರವರು ವಾದಿ ಸಂಘದ ಸಮನ್ವಯ ಸಭೆಯನ್ನು ಕರೆಯುವ ಅಧಿಕಾರವನ್ನು ಹೊಂದಿರುವುದಿಲ್ಲ. ಆದಕಾರಣ ಮೇಲ್ನೋಟಕ್ಕೆ ಈ ದಾವೆಯು ವಾದಿಯರ ಪರ ಇರುವ ಕಾರಣ ಅರ್ಜಿದಾರರು ಮಧ್ಯಂತರ ಅರ್ಜಿ ಕೋರುವಂತೆ ಆದೇಶ ಮಾಡಿ ಪ್ರತಿವಾದಿಯರು ಯಾವುದೇ ಮಧ್ಯಂತರ ಆದೇಶ ಮಾಡಿ ಪ್ರತಿವಾದಿಗಳು ವಾದಿ ಸಂಘದ ವ್ಯವಹಾರಗಳಲ್ಲಿ ಯಾವುದೇ ರೀತಿಯ ತಂಟೆತಕರಾರು ಮಾಡಬಾರದೆಂದು ತಾತ್ಕಾಲಿಕ ನಿರ್ಭಂದಕಾಜ್ಞೆಯನ್ನು ಕೋರಿರುತ್ತಾರೆ.

8. ಪ್ರತಿವಾದಿ 1 ರವರು ಸದರಿ ಮಧ್ಯಂತರ ಅರ್ಜಿಗೆ ತಮ್ಮ ಪರ ತಕರಾರನ್ನು ಸಲ್ಲಿಸಿದ್ದು ಪ್ರತಿವಾದಿ 2 ಮತ್ತು 3 ಮೇಮೋ ಸಲ್ಲಿಸಿ ಅದನ್ನು ಒಪ್ಪಿಕೊಂಡಿರುತ್ತಾರೆ.

9. ಈ ಅರ್ಜಿಯನ್ನು ಸಲ್ಲಿಸಿರುವ ಅರ್ಜಿದಾರರು ಸುಳ್ಳು ಮಾಹಿತಿ ನ್ಯಾಯಾಲಯಕ್ಕೆ ನೀಡಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದಕಾರಣ ವಾಸ್ತವಾಂಶಗಳಿಂದ ಆಗಲೀ ಅಥವಾ ಕಾನೂನು ಅಂಶಗಳಿಂದಾಗಲೀ ಊರ್ಜಿತವಾಗತಕ್ಕದ್ದಲ್ಲ.

10. ವಾದಿಯರು ಈ ದಾವೆಯಲ್ಲಿ ತಿಳಿಸಿದಂತೆ ಶ್ರೀ ವಿದ್ಯಾಲಕ್ಷ್ಮೀ ಸಂಘ ಸಂಬರಗಿ ಅಥಣಿ ತಾಲ್ಲೂಕು ಕರ್ನಾಟಕ ಸಹಕಾರಿ ಸಂಘಗಳ ನೊಂದಣಿ ಅಧಿನಿಯಮದಂತೆ ದಿನಾಂಕಃ 07-02-1992 ರಂದು ನೊಂದಣಿ ಆಗಿರುತ್ತದೆ. ಎಂಬ ವಿಚಾರ ಸರಿಇರುತ್ತದೆ. ಆದರೇ ಸದರಿ ಸಂಘದಲ್ಲಿ ಅಧ್ಯಕ್ಷ ಮತ್ತು 40 ಜನ ಸದಸ್ಯರು ಇರುತ್ತಾರೆ ಎಂಬ ವಿಚಾರ ಸುಳ್ಳಿನಿಂದ ಕೂಡಿರುತ್ತದೆ. ಮತ್ತು 2 ವಾದಿ ಸಂಘದ ಮುಖ್ಯವಾದ ಉದ್ದೇಶ ವಿದ್ಯಾಭ್ಯಾಸ ಕಲೆ ಸಾಹಿತ್ಯ ಸಂಸ್ಕೃತಿ ಬಗ್ಗೆ ತಿಳಿಸಬೇಕಂಬ ವಿಚಾರ ಸರಿ ಇರುತ್ತದೆ. ಪ್ರತಿವಾದಿ ನಂ. 1 ರಿಂದ 3 ಮತ್ತು 7 ರವರು ಕಾರ್ಯಕಾರಿ ಸಂಘದ 2010-11 ರ ಸದಸ್ಯರು ಆಗಿರುವುದಿಲ್ಲ ಎಂಬ ವಿಚಾರ ಸುಳ್ಳಿನಿಂದ ಕೂಡಿರುತ್ತದೆ. ಪ್ರತಿವಾದಿ 4 ರವರು ಮತ್ತು ಪ್ರತಿವಾದಿ 10, 7 ರವರು ಸಂಘದ ಆಡಳಿತ ಮಂಡಳಿಯ ನಿರ್ದೇಶಕರು ಆಗಿರುತ್ತಾರೆ. ಹಾಗೂ ಅರ್ಜಿದಾರರು ಸಲ್ಲಿಸಿರುವ ವಿಚಾರ ಪ್ರತಿವಾದಿ 5 ಅದಕ್ಕೆ ಉಪನ್ಯಾಸಕರಾಗಿ ಬೇರೆ ಶಾಲೆಯಲ್ಲಿ ಕಾರ್ಯನಿರ್ವಸುತ್ತಿದ್ದಾರೆ ಕಾರ್ಯನಿರ್ವಹಿಸುತ್ತಾರೆಂಬ ವಿಚಾರ ಪ್ರತಿವಾದಿ 6 ರವರು ಸದರಿ ಶಾಲೆಯಲ್ಲಿ ಅರೇಕಾಲಿಕ ಕಾರ್ಯನಿರ್ವಹಿಸುತ್ತಾರೆಂಬುದು ಸುಳ್ಳಿನಿಂದ ಕೂಡಿರುತ್ತದೆ. ಅವರು ಪೂರ್ಣಕಾಲಿಕವಾಗಿ ವಾದಿ ಸಂಘದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ವಾದಿ ಸಂಘವು ಸಂಘ ಮಿತ್ರ ಪ್ರೌಢ ಶಾಲೆ ಮತ್ತು ಸಂಘ ಮಿತ್ರ ಪದವಿ ಕಾಲೇಜು 2 ನೇ ನಡೆಸುತ್ತಿರುತ್ತಾರೆಂಬ ವಿಚಾರ ಸರಿ ಇರುತ್ತದೆ. ಆದರೇ ಸದರಿ ವಾದಿ ಸಂಘದಲ್ಲಿ 7 ಜನ ಸದಸ್ಯರು ಮಾತ್ರ ಇದ್ದು ಅದರಲ್ಲಿ 1. ಅಧ್ಯಕ್ಷ 2. ಉಪಾಧ್ಯಕ್ಷ 3. ಕಾರ್ಯದರ್ಶಿ 4. ಕಾರ್ಯಕಾರಿ ಮಂಡಳಿಯ ನಿರ್ದೇಶಕರು ಆಗಿರುತ್ತಾರೆ. ಮತ್ತು ಇದರ ಅವಧಿ 3 ವರ್ಷ ಆಗಿರುತ್ತದೆ ಎಂಬ ವಿಚಾರ ಸುಳ್ಳಿನಿಂದ ಕೂಡಿರುತ್ತದೆ.

11. ವಾದಿ ಸಂಘವು ಸಹಕಾರಿ ಸಂಘದ ನಿಯಮಾವಳಿ ಪ್ರಕಾರ ನಡೆಯುತ್ತಿರುತ್ತದೆ ಎಂದರೆ ಸರಿ ಆದರೆ ದಿನಾಂಕಃ 15-07-2005 ವಾದಿ ಸಂಘವು ಸಂಘದ ಸಮನ್ವಯ ಸಭೆ ನಡೆಸಿ ಹೊಸ ಕಾರ್ಯಕಾರಿ ಮಂಡಳಿಯನ್ನು 2005-06 ರಿಂದ 2007-08 ರವರೆಗೆ ಆಯ್ಕೆ ಮಾಡಿಕೊಂಡಿರುತ್ತಾರೆ. ಸದರಿ ಸಭೆಯಲ್ಲಿ 1. ಶನಿಬಾಯಿ ಅಧ್ಯಕ್ಷರು 2. ಮಹಾದೇವ ಲಕ್ಕಪ್ಪ ಕಾಂಬಳೆ ಉಪಾಧ್ಯಕ್ಷರು 3. ಗೋಪಾಲ ಚೊಕಾ ಕಾಂಬಳೆ ಕಾರ್ಯದರ್ಶಿ ಮತ್ತು ನಾರಾಯಣ ಸಿದ್ದು ಕಾಂಬಳೆ , ಪಾಂಡುರಂಗ ಕಾಬಂಳೆ, ಶೋಭಾ ಕಾಂಬಳೆ, ಯಲ್ಲವ್ವ ರವರು ಕಾರ್ಯಕಾರಿ ಮಂಡಳಿಯ ನಿರ್ದೇಶಕರಾಗಿ 2008-09 ರವರೆಗೆ ಆಯ್ಕೆ ಆಗಿರುತ್ತಾರೆಂಬ ವಿಚಾರ ಸುಳ್ಳಿನಿಂದ ಕೂಡಿರುತ್ತದೆ.

12. ಪ್ರತಿವಾದಿಯರು ಮುಂದುವರೆದು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸುತ್ತಾ ವಾದಿಯು ಸಂಘ ಸಹಕಾರಿ ಸಂಘ ನೊಂದಣಿ ಕಛೇರಿಯಲ್ಲಿ ಪ್ರತಿವಾದಿಗಳು ಪುನರ ನವೀಕರಣ ಮಾಡಿಕೊಂಡ ವಿಚಾರ ಸರಿ ಇರುತ್ತದೆ. ಆದರೆ ಪ್ರತಿವಾದಿ 1 ರಿಂದ 7 ರವರು ಇದರ ದುರುಪಯೋಗ ಪಡಿಸಿಕೊಂಡು ವಾದಿ ಸಂಘಲದ ಕಾರ್ಯಕಾರಿ ಸಮಿತಿಯ ಸಹ ಸದಸ್ಯರ ಸಹಿಗಳನ್ನು ಖಾಲಿ ಪತ್ರಕ್ಕೆ ಪಡೆದು ಅದನ್ನು ದುರುಪಯೋಗ ಪಡಿಸಿಕೊಂಡು ತಮಗೆ ಬೇಕಾದಂತೆ ಸಂಘದ ಬಯಲು 15 ನ್ನು ತಿದ್ದುಪಡಿ ಮಾಡಿಕೊಂಡು ಸದಸ್ಯರ ಸಂಖೆಯನ್ನು 7 ರಿಂದ 9 ಕ್ಕೆ ಯಾವುದೇ ಸಮನ್ವಯ ಸಭೆಯನ್ನು ಕರೆಯದೇ ಮತ್ತು ಕಾರ್ಯಕಾರಿ ಸದಸ್ಯರ ಹೆಸರುಗಳನ್ನು ಪಡೆಯದೇ ಸೃಷ್ಟಿಸಿರುತ್ತಾರೆ. ಮತ್ತು ಸದರಿ ಸೃಷ್ಟಿಸಿದ ಬೈಲವನ್ನು ಬೆಳಗಾವಿನ ಸಹಾಕಾರಿ ಸಂಘಗಳ ನೊಂದಣಿ ಕಛೇರಿಗೆ ನೀಡಿ ದಿನಾಂಕಃ 11-11-2009 ರಂದು ಆದೇಶ ಸಂಖ್ಯೆಃ ಡಿಎಲ್ಆರ್/ಎಸ್ಆರ್/114/91-92/9,10 ಎಂದು ಸಂಘ ಬಯಲಾದ ನಂ. 15 ನ್ನು ತಿದ್ದುಪಡಿ ಮಾಡಿಕೊಂಡಿರುತ್ತಾರೆ ಹಾಗೂ ಪ್ರತಿವಾದಿ 1 ರಿಂದ 7 ರವರು ಸದರಿ ಬೈಲವನ್ನು ತಿದ್ದುಪಡಿ ಮಾಡಿಕೊಂಡು ತಮಗೆ ಬೇಕಾದಂತೆ ದಾಖಲೆಗಳನ್ನು ಸೃಷ್ಟಿಸಿಕೊಂಡು ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ನೋಟಿಸ್‌ನ್ನು ಜಾರಿ ಮಾಡದೇ ಸಮನ್ವಯ ಸಭೆಯನ್ನು ಕರೆದಿರುತ್ತಾರೆ ಎಂಬ ವಿಷಯ ಸಂಪೂರ್ಣವಾಗಿ ಸುಳ್ಳಿನಿಂದ ಕೂಡಿರುತ್ತದೆ.

13. ವಾದಿಯು ತನ್ನ ದಾವಾ ಪತ್ರದಲ್ಲಿ ಮುಂದುವರೆದು ತಿಳಿಸಿರುವ ವಿಚಾರಗಳಾದ 1 ರಿಂದ 7 ಪ್ರತಿವಾದಿಗಳು ಸಂಘದ ಸದಸ್ಯರಿಗೆ ತಿಳಿಯದಂತೆ ಸಂಘದ ಬೈಲಾ ನಿಯಮವನ್ನು 15 ನ್ನು ತಿದ್ದುಪಡಿ ಮಾಡಿ ಹೆಚ್ಚುವರಿ ಇಬ್ಬರು ಸದಸ್ಯರನ್ನು ನೇಮಕ ಮಾಡಿಕೊಂಡಿರುತ್ತಾರೆ. ಹಾಗೂಪ್ರತಿವಾದಿ 1 ರಿಂದ 3 ರವರನ್ನು 2010-11 ರ ಸಾಲಿಗೆ ಆಯ್ಕೆ ಮಾಡಿಕೊಂಡಿರುವುದು ಕಾನೂನು ಬದ್ಧ ಆಗಿರುವುದಿಲ್ಲ. ಆದಕಾರಣ ಅವರ ಆಯ್ಕೆ ಊರ್ಜಿತವಾಗಿರುವುದಿಲ್ಲ ಆದಕಾರಣ ಇದು ಸುಳ್ಳಿನಿಂದ ಕೂಡಿರುತ್ತದೆ. ವಾದಿಯು ತನ್ನ ದಾವಾ ಪತ್ರದಲ್ಲಿ ತಿಳಿಸಿರುವ ವಿಚಾರ ದಿನಾಂಕಃ02-10-2007 ರಂದು ಕಾರ್ಯಕಾರಿ ಸಂಘದ ಸಮಿತಿಯ ಸಂಘದ ಅಧ್ಯಕ್ಷರಾದ ಶ್ರೀಮತಿಃ ಶನಿಬಾಯಿ ಕೊಂ ನಾಮದೇವ ಕಾಂಬಳೆ ರವರು ಮೃತ ಪಟ್ಟ ಕಾರಣ ಸಂಘಕ್ಕೆ ಶ್ರೀ ಅಕಾರಾಮ ಚೋಕಾ ಕಾಂಬಳೆ ರವರನ್ನು ವಾದಿ ಸಂಘದ ಸದಸ್ಯರಾದ ಹೆಚ್ಚುವರಿ ಸೇರ್ಪಡೇ ಮಾಡಿಕೊಳ್ಳಲು ನಿರ್ಣಸಲಾಗಿತ್ತು. ಅದನ್ನು ದುರುಪಯೋಗ ಪಡಿಸಿಕೊಂಡು 1 ರಿಂದ 7 ಪ್ರತಿವಾದಿಗಳು ಕಾರ್ಯಕಾರಿ ಸವಿತಿಯ ಹೆಸರುಗಳನ್ನು

ದುರುಪಯೋಗ ಪಡಿಸಿಕೊಂಡು ಶ್ರೀ ಶಂಕರ ಸದಾಶಿವ ರಾಜಮಾನೆ ಅವರನ್ನು ಹೆಚ್ಚುವರಿ ಶ್ರೀ ಅಕಾರಾಮ ಚೋಕಾ ಕಾಂಬಳೆ ರವರ ಬದಲಾಗಿ ಸೇರಿಸಿಕೊಳ್ಳಲಾಗಿದೆ.

14. ವಾದಿಯು ತನ್ನ ದಾವೆಯಲ್ಲಿ ಮುಂದುವರೆದು ತಿಳಿಸಿರುವ ವಿಚಾರ ದಿನಾಂಕ:25-10-2011 ಪ್ರತಿವಾದಿ 1 ರಿಂದ 7 ಷರೀಕ್ಕಾಗಿ ವಾದಿ ಸಂಘಕ್ಕೆ ನಷ್ಟ ಉಂಟುಮಾಡುವ ಉದ್ದೇಶದಿಂದ ಮೋಸದಿಂದ ಸಂಘದ ಹೆಸರಿನಲ್ಲಿ (ಲೇಟರ ಪ್ಯಾಡ) ಸಂಘದ ಪತ್ರಗಳು ಇರುವ ಪುಸ್ತಕವನ್ನು ಸೃಷ್ಟಿಸಿಕೊಂಡು ಸಿದ್ದ ಕಲಾ ಗ್ರಾಮೀಣ ಅಭಿವೃದ್ಧಿ ಕೇಂದ್ರ ಪ್ಲಾಟ ನಂ. 14 ರಾಣಿ ಚೆನ್ನಮ್ಮಾ ನಗರ, ಬೆಳಗಾವಿ ಎಂಬಲ್ಲಿ ಸಂಘ ಇರುತ್ತದೆಂದು ನಮೂದಿಸಿರುತ್ತಾರೆ ಮತ್ತು ಪಾಂಡುರಂಗ ಜಾನು ಕಾಂಬಳೆ ರವರನ್ನು ಅಧ್ಯಕ್ಷರಾಗಿ 2. ಮಾರಾಯ ಸಿದ್ದು ಕಾಂಬಳೆ ರವರನ್ನು ಉಪಾಧ್ಯಕ್ಷರಾಗಿ 3. ಅಪ್ಪಾಸಾಬ ಮಾರುತಿ ದೇವಮಾನೆ ಕಾರ್ಯದರ್ಶಿ 4. ಗೋಪಾಲ ಚೋಕಾ ಕಾಂಬಳೆ ಇವರನ್ನು ನಿರ್ದೇಶಕರನ್ನಾಗಿ 5. ಮಹಾದೇವ ಲಕ್ಕಪ್ಪಾ ಕಾಂಬಳೆ, ಶ್ರೀಮತಿ ಶೋಭಾ ಗಂಗಾರಾಮ ಕಾಂಬಳೆ, ಯಲ್ಲವ್ವ ಕಾಂಬಳೆ, ಲೀಬಾಂಜಿ ಶಂಕರ ಕಾಂಬಳೆ ಇವರುಗಳನ್ನು ನಿರ್ದೇಶಕರಾಗಿ ಆಯ್ಕೆ ಮಾಡಲಾಗಿರುತ್ತದೆಂಬ ವಿಚಾರ ಮತ್ತು ಆ ಬಗ್ಗೆ ಬೆಳಗಾವಿ ಸಹಾಕಾರಿ ಸಂಘಗಳ ನೊಂದಣಿ ಇಲಾಖೆಗೆ ಮಾಹಿತಿ ನೀಡಿ ಅದರಂತೆ ನೊಂದಣಿ ಮಾಡಿಸಿರುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ. ಕಾನೂನು ಬದ್ಧವಾಗಿ ನೊಂದಣಿ ಮಾಡಲಾಗಿದೆ. ಪ್ರತಿವಾದಿಯು ತಿಳಿಸುತ್ತಾ ದಿನಾಂಕ:25-10-2011 ರ ಸಿದ್ಧ ಕಲಾ ಗ್ರಾಮೀಣ ಕೇಂದ್ರ ಪ್ಲಾಟ ನಂ.14 ರಾಣಿ ಚೆನ್ನಮ್ಮಾ ನಗರ ಇದರ ಬಗ್ಗೆ ಕಾನೂನು ಬದ್ಧವಾದ ಸದರಿ ಶುಲ್ಕವನ್ನು ಮತ್ತು ಪತ್ರಗಳ ಪುಸ್ತಕಗಳನ್ನು ಪರಿಶೀಲಿಸಲಾಗಿರುತ್ತೆಂಬ ವಿಚಾರ ಸುಳ್ಳಿನಿಂದ ಕೂಡಿರುತ್ತದೆ.

15. ಪ್ರತಿವಾದಿಯು ಮುಂದುವರೆದು ತಿಳಿಸುತ್ತಾ ಸಿದ್ಧ ಕಲಾ ಗ್ರಾಮೀಣ ಕೇಂದ್ರ ಪ್ಲಾಟ ನಂ.14 ರಾಣಿ ಚೆನ್ನಮ್ಮಾ ನಗರ ಬೆಳಗಾವಿ ಸಂಘಕ್ಕೆ ವಿದ್ಯಾಲಕ್ಷ್ಮೀ ವಿದ್ಯಾಸಂಸ್ಥೆ ಯಾವುದೇ ಸಂಬಂಧ ಇರುವುದಿಲ್ಲ ಎಂಬ ವಿಚಾರ ಸರಿ ಇರುತ್ತದೆ. ಸದರಿ ಪ್ರತಿವಾದಿ 1 ರಿಂದ 7 ರವರೂ ವಾದಿ ಸಂಘಕ್ಕೆ ನಷ್ಟ ಉಂಟುಮಾಡುವ ಉದ್ದೇಶದಿಂದ ವಾದಿಯ ಸಂಘದ ಬೈಲಾ ನಿಯಮ 15 ನ್ನು ತಿದ್ದುಪಡಿ ಮಾಡಿ ಶಂಕರ ಸದಾಶಿವ ರಾಜಮಾನೆ ರವರನ್ನು, ಅಕಾರಾಮ ಚೋಕಾಕಾಂಬಳೆ ರವರ ಜಾಗಕ್ಕೆ ಆಯ್ಕೆ ಮಾಡಲಾಗಿರುತ್ತದೆ. ಹಾಗೂ ವಾದಿ ಸಂಘದ ಬಯಲಾವನ್ನು ಕಾನೂನುಬದ್ಧ ತಿದ್ದುಪಡಿ ಮಾಡಲಾಗಿರುತ್ತದೆ. ಎಂಬ ವಿಚಾರ ಸುಳ್ಳಿನಿಂದ ಕೂಡಿರುತ್ತದೆ. 1 ರಿಂದ 7 ನೇ ಪ್ರತಿವಾದಿಗಳು

ಶರೀಕ್ಕಾಗಿ ವಾದಿ ಸಂಘದ ಪರವಾಗಿ ಲೆಕ್ಕ ಪರಿಶೋದನೆ ಮಾಡಿ 2011 ರ ವರದಿ ಅಕ್ರಮವಾಗಿ ತಯಾರಿಸಿರುತ್ತಾರೆ. ಹಾಗೂ ತಮಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹಾ ದಿನಾಂಕಃ 28-05-2012 ರಂದು ಸದರಿ ದಾಖಲೆ ಬಗ್ಗೆ ಎಲ್ಲರಿಗೂ ಸಂಘದ ಸದಸ್ಯರಿಗೆ ನೋಟಿಸ ಜಾರಿ ಮಾಡಿರುವ ಕ್ರಮ ದುರುದ್ದೇಶ ಪೂರ್ವಕ ಆಗಿರುತ್ತೆಂದು ತಿಳಿಸಿರುವ ವಿಚಾರ ಸಂಪೂರ್ಣ ಸುಳ್ಳಿನಿಂದ ಕೂಡಿರುತ್ತದೆ. ಇದರ ಸಂಪೂರ್ಣವಾದ ಜವಾಬ್ದಾರಿ ವಾದಿಯರ ಮೇಲೆ ಇರುತ್ತದೆ.

16. ವಾದಿಯರು ತಮಗೆ ತಿಳಿಸಿರುವ ವಿಚಾರ ಸಂಘದ ಕಾರ್ಯದರ್ಶಿ, ಅಧ್ಯಕ್ಷರು, ದಿನಾಂಕಃ08-02-2012 ರಂದು 1 ರಿಂದ 7 ನೇ ಪ್ರತಿವಾದಿಗಳು ಶರೀಕ್ಕಾಗಿ, ಮೋಸದಿಂದ ಸಮಿತಿ ರಚಿಸಿರುವ ಬಗ್ಗೆ ಮತ್ತು ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಬಗ್ಗೆ ದಿನಾಂಕಃ 10-02-2012 ರಂದು ಬೆಳಗಾವಿ ಸಹಾಕಾರಿ ಸಂಘಗಳ ನೊಂದಣಿ ಕಛೇರಿಗೆ ಪತ್ರಬರೆದು ಮಾಹಿತಿ ತಿಳಿಸಿರುತ್ತಾರೆ ಹಾಗೂ ವಾದಿ ಸಂಘಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಬೈಲವನ್ನು ತಿದ್ದುಪಡಿ ಮಾಡಿರುತ್ತಾರೆಂದು ತಿಳಿಸಿದ್ದರೂ ಸಹಾ ಪ್ರತಿವಾದಿ 9 ರವರು ದಿನಾಂಕಃ 02-03-2012 ರಂದು ವಾದಿ ಸಂಘದ ಬಗ್ಗೆ ಆದೇಶ ಮಾಡಿ ದಿನಾಂಕಃ 10-02-2012 ರಂದು ಹೊಸ ಸಂಘವನ್ನು ಪುನರವೀಕರಣ ಮಾಡಿ ಆದೇಶ ಡಿಆರಎಲ್/ಎಸ್ಆರ/ವಿಎಲಎಆರ/11-12/1342 ಎಂದು ಮಾಡಿ ಸಂಘದ ಸಮಸ್ಯೆಗಳಿಗೆ ಯಾವುದೇ ತೊಂದರೆ ಆದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಬಹುದು ದಿನಾಂಕಃ 25-02-2012 ರಂತೆ ಕಾರ್ಯದರ್ಶಿ ವಾದಿಗಳು ಸಂಘದ ಕಾರ್ಯದರ್ಶಿಯವರಿಗೆ ತಿಳಿಸಿದ ಮೇರೆಗೆ 1 ರಿಂದ 4 ನ್ನು ಪ್ರತಿವಾದಿಗಳಿಗೆ ಈ ಸಂಬಂಧ ನೋಟಿಸನ್ನು ಜಾರಿ ಮಾಡಿರುತ್ತಾರೆಂಬ ವಿಚಾರಗಳಿಂದ ಈ ದಾವೆಯನ್ನು ಹೂಡಿರುವುದಾಗಿ ತಿಳಿಸಿರುತ್ತಾರೆ. ಮತ್ತು ಪ್ರತಿವಾದಿಯರು ತಿಳಿಸುತ್ತಾ ಈ ದಾವೆಯನ್ನು ಶ್ರೀ ಗೋಪಾಲ ಚೋಕಾ ಕಾಂಬಳೆ ರವರು ವಾದಿ ಸಂಘವಾದ ವಿದ್ಯಾಲಕ್ಷ್ಮೀ ವಿದ್ಯಾಸಂಸ್ಥೆ, ಸಂಬರಗಿ ಕಾರ್ಯದರ್ಶಿ ಆಗಿರಲಿಲ್ಲ ಆದಕಾರಣ ವಾದಿಯರಿಗೆ ಸಂಘದ ಹೆಸರುಗಳನ್ನು ದಾವೆ ಹೂಡಲು ಬರುವುದಿಲ್ಲ. ಸಂಘವನ್ನು ದಾವೆಗೆ ವಜಾಮಾಡುವಂತೆ ತಿಳಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರು ಮಧ್ಯಂತರ ಅರ್ಜಿ ಮತ್ತು ಅದಕ್ಕೆ ತಿಳಿಸಿರುವ ಲಿಖಿತ ತಕರಾರು ಪತ್ರ ವಾದಿಯ ವಿವಾದ ಪತ್ರ ನ್ಯಾಯಾಲಯದಲ್ಲಿ ತಿಳಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳನ್ನು ನನ್ನ ಗಮನಕ್ಕೆ ಮೂಡಿ ಬಂದಿರುತ್ತದೆ.

<u>ವಿವಾದಾಂಶಗಳು</u>

1. ಅರ್ಜಿದಾರರು ತಿಳಿಸಿರುವ ಈ ಮಧ್ಯಂತರ ಅರ್ಜಿ ಸಂಖ್ಯೆ 2 ಸಿಪಿಸಿ ಆದೇಶ 39 ನಿಯಮ 1 ಮತ್ತು 2 ರಂತೆ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬಹುದೆ?

2. ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದಿದ್ದರೆ ತಮಗೆ ತುಂಬಲಾರದ ನಷ್ಟವನ್ನು ಉಂಟುಮಾಡುತ್ತದೆಂದು ಸಾಬೀತು ಪಡಿಸುವರೆ?

3. ವಾದಿಯರ ದಾವೆಯು ಮೇಲ್ನೋಟಕ್ಕೆ ಊರ್ಜಿತಗೊಳಿಸಬಹುದು ದಾವೆ ಮತ್ತು ಮೇಲ್ನೋಟಕ್ಕೆ ಅರ್ಜಿಯನ್ನು ಪುರಸ್ಕರಿಸಬಹುದೆಂದು ಕಂಡು ಬರುತ್ತದೆಯೇ?

4. ಯಾವ ಆದೇಶ ?

17. ವಾದಿ ಮತ್ತು ಪ್ರತಿವಾದಿಯರ ವಾದ ಮತ್ತು ಪ್ರತಿವಾದ ವಾದ ಪತ್ರದ ಮತ್ತು ದಾವಾ ದಾಖಲೆಗಳನ್ನು ಅಂಶ ಈ ಕೆಳಕಂಡಂತೆ ಉತ್ತರಿಸಿರುತ್ತದೆ.

1. ವಿವಾದಾಂಶ ನಂ. 1- *ನಕಾರಾತ್ಮಕವಾಗಿ*

2. ವಿವಾದಾಂಶ ನಂ. 2- *ನಕಾರಾತ್ಮಕವಾಗಿ*

3. ವಿವಾದಾಂಶ ನಂ. 3- *ನಕಾರಾತ್ಮಕವಾಗಿ*

4. ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿಃ

<u>ಕಾರಣಗಳು</u>

18. ಅಂಶ 1 ರಿಂದ 3: ಇವುಗಳು ಒಂದಕ್ಕೊಂದು ಅವಲಂಬಿಸಿರುವುದರಿಂದ ಆದೇಶ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಈ ಮಧ್ಯಂತರ ಅರ್ಜಿ ಜೊತೆಗೆ ಲಗತ್ತು ಪಡಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಶ್ರೀ ಗೋಪಾಲ ಬೀನ್ ಚೋಕಾ ಕಾಂಬಳೆ ರವರು ಸಂಘದ ಕಾನೂನು ಪ್ರತಿನಿಧಿ ಆಗಿದ್ದು ಸದರಿ ಸಂಘದ ಕಾರ್ಯದರ್ಶಿ ಆಗಿರುತ್ತಾರೆ. ಇವರು ತಿಳಿಸುತ್ತಾ ವಾದಿ ಸಂಘವು

ಶ್ರೀ ವಿದ್ಯಾಲಕ್ಷ್ಮೀ ವಿದ್ಯಾಸಂಸ್ಥೆ ಸಂಬರಗಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆಯಿಂದ ಕರ್ನಾಟಕ ಸಂಘಗಳ ನೊಂದಣಿ ಅಧಿನಿಯಮದಂತೆ ದಿನಾಂಕಃ07-02-1992 ರಂದು ಬೆಳಗಾವಿನಲ್ಲಿ ನೊಂದಣಿ ಆಗಿರುತ್ತದೆ. ಸದರಿ ಸಂಸ್ಥೆಯಲ್ಲಿ ಅಧ್ಯಕ್ಷರು ಮತ್ತು ಸದಸ್ಯರು ಸೇರಿ 40 ಜನರ ಸದಸ್ಯರಿರುತ್ತಾರೆ. ಸದರಿ ಸಂಘದ ಮುಖ್ಯವಾದ ಉದ್ದೇಶ ಎನೆಂದರೆ ವಿದ್ಯಾರ್ಥಿಗಳಿಗೆ ವಿಜ್ಞಾನ, ಕಲೆ, ಸಾಹಿತ್ಯದ ಬಗ್ಗೆ ಎಲ್ಲ ರೀತಿಯ ವಿದ್ಯಾಭ್ಯಾಸವನ್ನು ಬಡ ವಿದ್ಯಾರ್ಥಿಗಳಿಗೆ ನೀಡುವ ಉದ್ದೇಶವನ್ನು ಹೊಂದಿರುತ್ತದೆ. ಈ ದಾವೆಯ 1 ರಿಂದ 3 ಹಾಗೂ ಪ್ರತಿವಾದಿ ನಂ.7 ರವರು ಸಂಘದ ನಿರ್ದೇಶಕರು ಆಡಳಿತ ಮಂಡಳಿಯ ನಿರ್ದೇಶಕರು ಆಗಿರುತ್ತಾರೆ. ಪ್ರತಿವಾದಿ ನಂ. 4 ರವರು ಸದರಿ ಸಂಘದ ಅಧ್ಯಕ್ಷ ಆಗಿರುವುದಾಗಿ ಪ್ರತಿವಾದಿ ಮಾಡಿರುತ್ತಾರೆ. ಪ್ರತಿವಾದಿ 5 ರವರು ಸಂಬರಗಿ ನಲ್ಲಿರುವ ಸಂಘ ಮಿತ್ರ ಪದವಿ ಕಾಲೇಜಿನ ಕನ್ನಡ ಉಪನ್ಯಾಸಕಾರಾಗಿರುತ್ತಾರೆ. ಮತ್ತು ಪ್ರತಿವಾದಿ 6 ರವರು ಸದರಿ ಸಂಘ ಮಿತ್ರ ಪದವಿ ಕಾಲೇಜಿನ ಅರೇಕಾಲಿಕ ಗ್ರಂಥ ಪಾಲಕರಾಗಿ ರುತ್ತಾರೆ ಮತ್ತು 8 ನೇ ಪ್ರತಿವಾದಿಯ ರಾಜ್ಯಸರ್ಕಾರದ್ದು ಮತ್ತು ನೇ ಪ್ರತಿವಾದಿಯು ಸಹಾಕಾರಿ ಸಂಘಗಳ ನೊಂದಣಿ ಅಧಿಕಾರಿಗಳಾಗಿರುತ್ತಾರೆ.

19. ಸದರಿ ವಾದಿ ಸಂಘವು ಸಂಘ ಮಿತ್ರ ಪ್ರೌಢ ಶಾಲೆಯಲ್ಲಿ ಮತ್ತು ಸಂಘ ಮಿತ್ರ ಪದವಿ ಪೂರ್ವ ಕಾಲೇಜು ಮತ್ತು ಸಂಬರಗಿಯಲ್ಲಿ ನಡೆಸುತ್ತಿದ್ದು ವಾದಿ ಸಂಘದಲ್ಲಿ 7 ಜನ ಸದಸ್ಯರು ಇದ್ದು ಇದರಲ್ಲಿ ಒಬ್ಬರು ಅಧ್ಯಕ್ಷ್ಯ 2.ಉಪಾಧ್ಯಕ್ಷರು 3.ಕಾರ್ಯದರ್ಶಿ 4. ಜನರು ಆಡಳಿತ ವರ್ಗದ ನಿರ್ದೇಶಕರು ಆಗಿರುತ್ತಾರೆ. ಮತ್ತು ಇವರ ಕಾಲಾವಧಿ 3 ವರ್ಷ ಆಗಿರುತ್ತದೆ. ಸದರಿ ವಾದಿಯ ಸಂಘವು ಸಂಘದ ಬಯಲಾವನ್ನು ದಿನಾಂಕಃ 15-07-2005 ರಂದು ಅಳವಡಿಸಿಕೊಂಡಿದ್ದು ಮತ್ತು 2005-06 ರಿಂದ 2007-08 ರವರೆಗೆ ಹೊಸ ಸಂಘದ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಅದರಂತೆ 1. ಶ್ರೀಮತಿಃ ಶನಿಬಾಯಿ ಅಧ್ಯಕ್ಷ್ಯರಾಗಿ 2. ಶ್ರೀ ನಾಮದೇವ ಲಕ್ಕಪ್ಪಾ ಕಾಂಬಳೆ ಉಪಾಧ್ಯಕ್ಷರಾಗಿ ಮತ್ತು ಅರ್ಜಿದಾರ ಗೋಪಾಲ ರವರು ಕಾರ್ಯದರ್ಶಿಯಾಗಿ ಮತ್ತು ಶ್ರೀ ನಾರಾಯಣ ಸಿದ್ದು ಕಾಂಬಳೆ, ಪಾಂಡುರಂಗ ಜಾನು ಕಾಂಬಳೆ, ಶೋಭಾ ಗಂಗಾರಾಮ ಕಾಂಬಳೆ, ಯಲ್ಲವ್ವ ಪ್ರಭು ಕಾಂಬಳೆ, 2008-09 ರಿಂದ 2010-11 ರವರೆಗೆ ಅಂದರೆ ಇಂದಿನವರೆಗೆ ನಿರ್ದೇಶಕರು ಆಗಿರುತ್ತಾರೆ.

**20.** ಸದರಿ ಮಧ್ಯಂತರ ಅರ್ಜಿಗೆ ಪ್ರತಿವಾದಿಯು ಈ ರೀತಿ ವಾದ ಮಂಡನೆಯನ್ನು ಮಾಡಿರುತ್ತಾರೆ. ವಾದಿ ಸಂಘದ ವಿದ್ಯಾಲಕ್ಷ್ಮೀ ವಿದ್ಯಾಸಂಸ್ಥೆ ಸಂಬರಗಿ ಸಹಕಾರಿ ಸಂಘಗಳ ಅಧಿನಿಯಮ **1961** ರಂತೆ ಬೆಳಗಾವಿನ ಸಹಾಕಾರಿ ಸಂಘ ಕಛೇರಿಯಲ್ಲಿ ಆದೇಶ ಡಿಆರ/ಎಸಒಆರ/**2014-91-92** ರಂತೆ ನೊಂದಣೆ ಆಗಿರುತ್ತದೆ. ಸದರಿ ಸಂಘದ ಸಂಸ್ಥಾಪಕರಾದ **1.** ನಾಮದೇವ ಚೋಕಾ ಕಾಂಬಳೆ **2.** ಮಹಾದೇವ ಲಕ್ಕಪ್ಪ ಕಾಂಬಳೆ **3.** ಮಾರುತಿ ಕಾಂಬಳೆ **4.** ಗೋಪಾಲ ಚೋಕಾ ಕಾಂಬಳೆ **5.** ಪಾಂಡುರಂಗ ಕೆ ಕಾಂಬಳೆ **6.** ಗಂಗಾರಾಮ ಕಾಂಬಳೆ **7.** ಯಲ್ಲವ್ವಾ ಪ್ರಭು ಕಾಂಬಳೆ ಇರುಗಳಲ್ಲಿ ಶ್ರೀ ನಾಮದೇವ ಕಾಂಬಳೆ ರವರು ಮೃತ ಪಟ್ಟಿರುತ್ತಾರೆ ಇವರು ಅಧ್ಯಕ್ಷರಾಗಿದ್ದರು ಅದೇರೀತಿ ಮಹಾದೇವ ಲಕ್ಕಪ್ಪ ಕಾಂಬಳೆ ಉಪಾಧ್ಯಕ್ಷರಾಗಿದ್ದು, ಮಾರುತಿ ಇವರು ಕಾರ್ಯದರ್ಶಿ ಆಗಿದ್ದರು ಉಳಿಕೆ ಸದಸ್ಯರು ಕಾರ್ಯಕಾರಿ ಸಮಿತಿ ಸದಸ್ಯರೂ ಆಗಿರುತ್ತಾರೆ. ಸದರಿ ಸಂಖ್ಯೆ ಸಂಘ ಮಿತ್ರ ಸಂಯುಕ್ತ ಪದವಿ ಪೂರ್ವ ಕಾಲೇಜು ಮತ್ತು ಸಂಘ ಮಿತ್ರ ಪ್ರೌಢ ಶಾಲೆ ಇದ್ದು ಸದರಿ ಶಾಲೆಗಳಿಗೆ ಒಳ್ಳೆಯ ಹೆಸರು ಇರುತ್ತದೆ.

21. ಸದರಿ ಸಂಘದಲ್ಲಿ 2009 ನೆ ಸಾಲಿನಲ್ಲಿ ಸಂಘದ ಸದಸ್ಯರನ್ನು ಹೆಚ್ಚು ಮಾಡಬೇಕಾದ ಅವಶ್ಯಕತೆ ಇದ್ದ ಕಾರಣದಿಂದ ಕಾರ್ಯಕಾರಿ ಸದಸ್ಯರನ್ನು 7 ರಿಂದ 9 ಕ್ಕೆ ಹೆಚ್ಚು ಮಾಡುವ ಉದ್ದೇಶದಿಂದ ಸಂಘದ ಬಯಲಾವನ್ನು ವಿಶೇಷ ಸಮನ್ವಯ ಸಭೆಗೆ ಸಂಘವು ದಿನಾಂಕಃ 24-06-2009 ರಂದು ಎಲ್ಲ ಸದಸ್ಯರಿಗೆ ದಿನಾಂಕಃ 01-06-2009, 24-06-2009 ರಂದು ಸಮನ್ವಯ ಸಭೆ ನಡೆಸಿ ಸಂಘದ ಬೈಲಾ 15 ನ್ನು ತಿದ್ದುಪಡಿ ಮಾಡಿ ಸರ್ವಾನುಮತದಿಂದ ಒಪ್ಪಿಗೆಯನ್ನು ಕೊಟ್ಟು ಸಂಘದ ಅಧ್ಯಕ್ಷರನ್ನು 7 ರಿಂದ 9 ಕ್ಕೆ ಹೆಚ್ಚಿಸಲಾಯಿತು. ಹೊಸ ಸದಸ್ಯರು ದಿನಾಂಕಃ 24-06-2009 ಸಮನ್ವಯ ಸಭೆಯು ಈ ಕೆಳಕಂಡಂತೆ ಇರುತ್ತದೆ. 1. ಶ್ರೀಮತಿಃ ಶನಿವಾಯಿ ಕೊಂ ನಾಮದೇವ ಕಾಂಬಳೆ ಅಧ್ಯಕ್ಷರು 2. ಮಹಾದೇವ ಲಕ್ಕಪ್ಪ ಕಾಂಬಳೆ ಉಪಾಧ್ಯಕ್ಷರು 3. ಗೋಪಾಲ ಚೋಕಾ ಕಾಂಬಳೆ ಕಾರ್ಯದರ್ಶಿಗಳು ಮತ್ತು ನಾರಾಯಣ ಸಿದ್ದು ಕಾಂಬಳೆ, ಪಾಂಡುರಂಗ ಕಾಂಬಳೆ, ಶೋಭಾ ಗಂಗಾರಾಮ ಕಾಂಬಳೆ, ಯಲ್ಲವ್ವಾ ಪ್ರಭು ಕಾಂಬಳೆ, ಅಪ್ಪಾಸಾಬ ಕಾಂಬಳೆ, ಗಣಪತಿ ದೇವಮಾನೆ, ಲಿಂಬಾಜಿ ಶಂಕರ ರವರನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಗಿರುತ್ತದೆ. ಹಾಗೂ ಸಂಘದ ಕಾರ್ಯದರ್ಶಿ ಗೋಪಾಲ ಚೋಕಾ ಕಾಂಬಳೆ, ರವರು ಸಂಘದ ಬೈಲಾವನ್ನು ಬೆಳಗಾವಿನ ಸಹಕಾರ ಸಂಘ ನೊಂದಣೆ ಕಛೇರಿಯಲ್ಲಿ ನೊಂದಾಯಿಸಿರುತ್ತಾರೆ. ಅದರಂತೆ ದಿನಾಂಕಃ16-07-2009 ರಂದು ಕಾರ್ಯಕಾರಿ ಮಂಡಳಿಗೆ ಸದಸ್ಯರುಗಳ ಸಂಖ್ಯೆಯನ್ನು 7 ರಿಂದ 9 ಕ್ಕೆ ಹೆಚ್ಚಿಸಿಕೊಂಡಿರುವ ಬಗ್ಗೆ ತಿಳಿಸಿ ಸದರಿ ಸದಸ್ಯರ ಒಪ್ಪಿಗೆ ಮೇರೆಗೆ ಸದರಿ ಸಂಘದ ತಿದ್ದುಪಡಿ ಬೈಲಾವನ್ನು ಬೆಳಗಾವಿ ಸಹಕಾರ ಸಂಘಗಳ ಕಛೇರಿಯಲ್ಲಿ ನೊಂದಾಯಿಸಲಾಗಿರುತ್ತದೆ.

22. ಸದರಿ ಸಂಘದ ಒಪ್ಪಿಗೆಯನ್ನು ಸಂಘದ ಕಾರ್ಯಕಾರಿ ಸಂಘದ ಕಾರ್ಯದರ್ಶಿಯಾದ ಶ್ರೀ ಗೋಪಾಲ ಚೋಕಾ ಕಾಂಬಳೆ ರವರು ಬೆಳಗಾವಿ ಜಿಲ್ಲಾ ಸಹಕಾರಿ ಸಂಘದ ನೊಂದಣಿ ಅಧಿಕಾರಿಯಲ್ಲಿ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ತಿದ್ದುಪಡಿ ಆಗಿರುತ್ತದೆ. ಸದರಿ ಬೆಳಗಾವಿ ಜಿಲ್ಲಾ ಸಹಕಾರಿ ಸಂಘಗಳ ಆದೇಶ ಡಿಆರಎಲ/ಎಸಎಸಬ/114/91-92/2009-10 ದಿನಾಂಕಃ 11-11-2009 ರಂದು ತಿದ್ದುಪಡಿ ಆಗಿರುತ್ತದೆ. ಸದರಿ ಕಾರ್ಯಕಾರಿ ಮಂಡಳಿಯು 2009 ರಿಂದ 2011 ಕ್ಕೆ ಹೊಸ ಸದಸ್ಯರಾದ ಅಪ್ಪಾಸಾಬ ಮಾರುತಿ ದೇವಮಾನೆ, ಲಿಂಬಾಜಿ ಶಂಕರ ಅವರು ಹೆಚ್ಚುವರಿಯಾಗಿ 2008-09, 2009-11 ಕ್ಕೆ ಸೇರ್ಪಡೆ ಮಾಡಿರುವ ಬಗ್ಗೆ ಅರ್ಜಿ ನೀಡಿ ಸಂಘವನ್ನು ಸಂಘದ ನೊಂದಣಿ ನವೀಕರಣ ಮಾಡಲಾಗಿರುತ್ತದೆ. ಪರಿಸ್ಥಿತಿ ಈ ರೀತಿ ಇರುವಾಗ ಸಂಘದ ಅಧ್ಯಕ್ಷರಾಗಿ ಶ್ರೀಮತಿ ಶನೀಬಾಯಿ ಕೊಂ ನಾಮದೇವ ಕಾಂಬಳೆ ದಿನಾಂಕಃ 02-02-2011 ರಂದು ಮೃತ ಪಟ್ಟಿರುತ್ತಾರೆ. ಆದಕಾರಣ ದಿನಾಂಕಃ10-10-2011 ರಿಂದ ಸಮನ್ವಯ ಸಭೆಯನ್ನು ಕರೆದು ತಾತ್ಕಾಲಿಕವಾಗಿ ಶ್ರೀ ಪಾಂಡುರಂಗ ಕಾಂಬಳೆ ಅವರನ್ನು ಅಧ್ಯಕ್ಷರನ್ನಾಗಿ ಮತ್ತು ಶಂಕರ ದೇವಮಾನೆ ಅವರನ್ನು ಕಾರ್ಯಕಾರಿ ಮಂಡಳಿಗೆ ಸೇರಿಸಿಕೊಂಡಿರುತ್ತಾರೆ. ಸದರಿ ಸಂಘವು ದಿನಾಂಕಃ 25-10-2011 ರಂದು ಸಂಘದ ಅವಧಿ ಮುಕ್ತಾಯ ಆಗಿದ್ದು 2011-12 ಮತ್ತು 2013-14 ರ ಸಾಲಿಗೆ ಹೊಸ ಸಂಘದ ಕಾರ್ಯಕಾರಿ ಮಂಡಳಿಯ ಸದಸ್ಯರನ್ನು ಆರಿಸಲಾಗಿರುತ್ತದೆ. ಅದರಂತೆ 1. ಪಾಂಡುರಂಗ ಜ್ಞಾನು ಕಾಂಬಳೆ 2. ನಾರಾಯಣ ಸಿ ಕಾಂಬಳೆ ಉಪಾಧ್ಯಕ್ಷರು ಅಪ್ಪಾಸಾಬ ಮಾರುತಿ ದೇವಮಾನೆ ಕಾರ್ಯದರ್ಶಿ 4. ಗೋಪಾಲ ಚೋಕಾ ಕಾಂಬಳೆ, ಮಹಾದೇವ ಲಕ್ಕಪ್ಪಾ ಕಾಂಬಳೆ, ಶೋಭಾ ಗಂಗಾರಾಮ ಕಾಂಬಳೆ, ಯಲ್ಲವ್ವಾ ಪಾಂಡುರಂಗ ಕಾಂಬಳೆ, ಲಿಂಬಾಜಿ ಸದಾಶಿವ ದೇವಮಾನೆ, ಶಂಕರ ಸದಾಶಿವ ರಾಜಮಾನೆ, ಇವರುಗಳು ಕಾರ್ಯಕಾರಿ ಸದಸ್ಯರಾದ ಆಯ್ಕೆ ಆಗಿರುತ್ತಾರೆ. ಈ ಬಗ್ಗೆ ಅಧ್ಯಕ್ಷರಾಗಿ ಅಪ್ಪಾಸಾಬ ಮಾರುತಿ ದೇವಮಾನೆ, ಇವರ ಸದರಿ ದಾಖಲೆಗಳನ್ನು ಬೆಳಗಾವಿ ಸಹಕಾರಿ ಸಂಘಗಳ ನೊಂದಣಿ ಕಛೇರಿಗೆ ನೀಡಿ ಸಂಘವನ್ನು ಸಂಘದ ಸದಸ್ಯತ್ವವನ್ನು ನವೀಕರಣ ಮಾಡಿಸಿರುತ್ತಾರೆ.

23. ಪರಿಸ್ಥಿತಿ ಈ ರೀತಿ ಇರಬೇಕಾದರೆ ಸಂಘವು ನಿಯಮಾವಳಿ ಪುಸ್ತಕ ನಿಯಮದಲ್ಲಿ ಕೈ ತಪ್ಪಿನಿಂದ ಸಿದ್ದ ಕಲಾ ಗ್ರಾಮೀಣ ಅಭಿವೃದ್ಧಿ ಕೇಂದ ಬೆಳಗಾವಿ ಎಂದು ನಿರ್ಲಕ್ಷತನದಿಂದ ನಮೂದಾಗಿರುತ್ತದೆ. ಈ ದಾವೆ ಶ್ರೀ ಗೋಪಾಲ ಚೋಕಾ ಕಾಂಬಳೆ ರವರು ದಿನಾಂಕಃ 25-06-2009 ರಂದು ಆದ ವಿಶೇಷ ಸಮನ್ವಯ ಸಭೆ ಮತ್ತು ದಿನಾಂಕಃ 16-07-2009 ರಂದು ಆದ ಕಾರ್ಯಕಾರಿ

ಸಮಿತಿ ವಿಶೇಷ ಸಭೆ ನಿಯಮಾವಳಿಗಳನ್ನು ಸಭೆಯಲ್ಲಿ ಊರ್ಜಿತಗೊಳಿಸಿದರ ಬಗ್ಗೆ ಮತ್ತು ಬಯಲಾಗೆ ತಿದ್ದುಪಡಿ ಮಾಡಿರುವ ಬಗ್ಗೆ ಈ ದಾವೆಯನ್ನು ಹೂಡಿರುತ್ತಾರೆ.

**24.** ಕಾರ್ಯಕಾರಿ ಸಮಿತಿ **1** ರಿಂದ **7** ರವರೆಗೆ **9** ಕ್ಕೆ ಹೆಚ್ಚಿಸಿ ಅದರೊಂದಿಗೆ **2009** ರಿಂದ **2011** ರವರೆಗೆ ಹೆಚ್ಚುವರಿ ಮಾಡಿ ಕೊಂಡಿರುವ ಬಗ್ಗೆ ಮೇಲ್ಮನವಿ ಸಲ್ಲಿಸಬೇಕೆ ಹೊರತು ಸಿವಿಲ ದಾವೆ ಹೂಡಲು ಬರುವುದಿಲ್ಲ. ಕಾನೂನು ಬದ್ಧವಾಗಿ ಆಯ್ಕೆ ಆದ ಅಧ್ಯಕ್ಷರನ್ನು ಸದರಿ ನೊಂದಣಿ ಮಾಡಿಸಿದ್ದರಿಂದ ಅದು ಕ್ರಮಬದ್ಧವಾಗಿ ಇರುತ್ತದೆ. ಈ ಮತ್ತು ಹೊಸ ಕಾರ್ಯಕಾರಿ ಸಮಿತಿಯ ಸಭೆ ಮತ್ತು ವಾರ್ಷಿಕ ಸಮನ್ವಯ ಸಭೆ ದಿನಾಂಕಃ **25-10-2011** ರಂದು ನಡೆದಿದ್ದು ಸದರಿ ಸಭೆಗೆ ಶ್ರೀ ಗೋಪಾಲ ಚೋಕಾ ಕಾಂಬಳೆ ರವರ ಹಾಜರು ಇದ್ದು ಅವರು ಸಹಾ ಸದರಿ ಹೊಸ ಕಾರ್ಯಕಾರಿ ಮಂಡಳಿಯನ್ನು ಒಪ್ಪಿರುವುದರಿಂದ ಶ್ರೀ ಗೋಪಾಲ ಚೋಕಾ ಕಾಂಬಳೆ ಇದ್ದಂತಹ ಜಾಗದಲ್ಲಿ ಹೊಸದಾಗಿ ಶ್ರೀ ಮಾರುತಿ ದೇವಮಾನೆಯವರನ್ನು ಆಯ್ಕೆ ಮಾಡಿರುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತಾರೆ. ವಾದಿಯು ನ್ಯಾಯಾಲಯದಲ್ಲಿ ಶುದ್ಧ ಹಸ್ತದಿಂದ ಬಂದಿರದ ಕಾರಣ ವಾದಿಯರಿಗೆ ತಮ್ಮ ದಾವಾ ಪತ್ರದಲ್ಲಿ ತಿಳಿಸಿರುವ ಅಂಶ ಸುಳ್ಳಿನಿಂದ ಕೂಡಿರುವುದರಿಂದ ವಾದಿಯ ಕೋರಿದಂತೆ ನಿರ್ಬಂದಕಾಜ್ಞೆಗೆ ಆದೇಶ ಪಡೆಯಲು ಅರ್ಹರಾಗಿರುವುದಿಲ್ಲ. ವಾದಿಯರು ತಮ್ಮ ಬಾಗದಲ್ಲಿ ಬೇರೆಯವರಿಗೆ ಅವಕಾಶ ಮಾಡಿ ಕೊಟ್ಟಿದ್ದನ್ನು ಸಹಿಸದೇ ಹೊಟ್ಟೆ ಕಿಚ್ಚಿನಿಂದ ಈ ದಾವೆ ಸಲ್ಲಿಸಿರುತ್ತಾರೆ. ವಾದಿ ಮುಖ್ಯವಾಗಿ **1** ರಿಂದ **7** ನೇ ಪ್ರತಿವಾಯರಿಗೆ ತೊಂದರೆ ಕೊಡಬೇಕೆಂದು ಕೆಲವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಈ ದಾವೆಯನ್ನು ಹೂಡಿರುತ್ತಾರೆ. ಮತ್ತು ಸಂಘದ ಕಾರ್ಯಕಾರಿ ಸಮಿತಿಯ ಸಭೆಯು **25-10-2011** ರಂದು ಮಾಡಿರುವ ಆದೇಶದ ವಿರುದ್ಧ ವಾದಿಯು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಮತ್ತು ಇವರು ಸಹಾ ಸದರಿ ಸಭೆಯಲ್ಲಿ ಹಾಜರು ಇದ್ದು ಆದಕಾರಣ ಮತ್ತು ಸಂಘದ ಎಲ್ಲ ಸದಸ್ಯರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿರದ ಕಾರಣ ವಾದಿಯ ದಾವೆಯ ಅವಶ್ಯಕ ಪಕ್ಷಗಾರ ಮಾಡಿದ ಕಾರಣ ಊರ್ಜಿತವಾಗಿರುವುದಿಲ್ಲ. ಸದರಿ ವಾದಿ ವಿಚಾರದ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ನೊಂದಣೆ ಕಾಯ್ದೆ ಬಗ್ಗೆ **1960** ರಂತೆ ದಾವೆ ನಡೆಸಲು ಸಿವಿಲ ನ್ಯಾಯಾಲಯಕ್ಕೆ ಕಾನೂನು ಕಾನೂನಿನ ಪ್ರಕಾರ ಊರ್ಜಿತ ಇರದ ಕಾರಣ ವಾದಿಗಳು ವಾದಿಯು ಊರ್ಜಿತವಾಗಿರುವುದಿಲ್ಲ. ಮತ್ತು ವಾದಿಯು ತಿಳಿಸಿರುವ ಬೈಲಾ ತಿದ್ದುಪಡಿಯು **2009** ರಂದು ಊರ್ಜಿತ ಆಗಿದ್ದು ವಾದಿಯು ಕಾಲ ಸಮಿತಿಯಿಂದ ಭಾದಿತ ಆಗಿರುತ್ತದೆ. ಆದಕಾರಣದಿಂದ ನ್ಯಾಯಾಲಯವು ವಾದಿಗಳ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆಗೆ ಆದೇಶ ನೀಡಿದಲ್ಲಿ ಪ್ರತಿವಾದಿಯರಿಗೆ ಮತ್ತು ಸಂಘದ ಆಡಳಿತಕ್ಕೆ ತೊಂದರೆ ಆಗುವ ಕಾರಣದಿಂದ

ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿದರೇ ವಾದಿ ಯಾವುದೇ ನಷ್ಟ ಸಂಬಂಧಿಸಿದ ಕಾರಣ ಮತ್ತು ವಾದಿ ಈ ಮಧ್ಯಂತರ ಅರ್ಜಿಯನ್ನು ವಜಾ ಮಾಡುವಂತೆ ಪ್ರಾರ್ಥಿಸಿರುತ್ತಾರೆ.

**25.** ವಾದಿಯು ಈ ದಾವೆಯಲ್ಲಿ ತನ್ನ ಪರವಾಗಿ ಕೆಲವು ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ. ಸದರಿ ಸಂಘದ ನೊಂದಣಿ ಆದ ಬಗ್ಗೆ ಸದರಿ ಸಂಘದ ಮೂಲ ನಡಾವಳಿ ಪ್ರತಿ ಮತ್ತು ಸಂಘದ ಸದಸ್ಯರ ಪ್ರತಿ ಮತ್ತು ಬಯಲಾ ಪ್ರತಿಗಳನ್ನು ಹಾಜರು ಪಡಿಸಿರುತ್ತಾರೆ. ದಿನಾಂಕಃ **25-10-2001** ರಂದು ನಡೆದಿರುವ ಸಮನ್ವಯ ಸಭೆ ಪ್ರತಿಗಳನ್ನು ಹಾಜರು ಪಡಿಸಿರುತ್ತಾರೆ. ಮತ್ತು ಸಹಾಕಾಸರ ಸಂಘದಿಂದ ನಡೆದಿರುವ ದಿನಾಂಕಃ **20-05-2012** ರ ಮೂಲ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಮತ್ತು **1** ಪೊಟೋವನ್ನು ಹಾಜರು ಪಡಿಸಿದ್ದು ಸದರಿ ಪೋಟೋದಲ್ಲಿ ವಿದ್ಯಾಲಕ್ಷ್ಮೀ ವಿದ್ಯಾ ಸಂಸ್ಥೆ ಆಡಳಿತ ಮಂಡಳಿಯ **9** ಜನರ ಹೆಸರು ಇರುವ ನಾಮಪತ್ರವನ್ನು ಹಾಜರು ಪಡಿಸಿದ್ದು ಅಧ್ಯಕ್ಷರು ಶ್ರೀ ಶನಿಬಾಯಿ ನಾಮದೇವ ಕಾಂಬಳೆ, ಉಪಾಧ್ಯಕ್ಷರು ಶ್ರೀ ಮಹಾದೇವ ಲಕಪ್ಪ ಕಾಂಬಳೆ, ಕಾರ್ಯದರ್ಶಿ ಯಾಗಿ ಶ್ರೀ ಗೋಪಾಲ ಚೋಕಾ ಕಾಂಬಳೆ, ಸದಸ್ಯರಾಗಿ ಶ್ರೀ ಪಾಂಡುರಂಗ ಕಾಂಬಳೆ, ನಾರಾಯಣ ಸಿದ್ದು ಕಾಂಬಳೆ, ಯಲ್ಲವ್ವಾ ಪ್ರಭು ಕಾಂಬಳೆ, ಅಪ್ಪಾಸಾಬ ಕಾಂಬಳೆ, ಲಿಂಬಾಜಿ ಕಾಂಬಳೆ, ಸದರಿಯವರು ಯಾವ ವರ್ಷದಿಂದ ಯಾವ ವರ್ಷ ಆಯ್ಕೆ ಆಗಿರುತ್ತಾರೆಂದು ತಿಳಿಸಿರುವುದಿಲ್ಲ. ಮತ್ತು ಸದರಿ ಪೋಟೋ ಯಾವ ವರ್ಷದಲ್ಲಿ ನಮೂದಿಸಿದ್ದು ಎಂದು ದಿನಾಂಕಃ **20-03-2012** ರಂದು ಪೊಟೋದ ಮೇಲುಗಡೆ ಪ್ರತ್ಯೇಕವಾಗಿ ನಮೂದು ಮಾಡಿದ್ದು ಕಂಡುಬರುತ್ತದೆ. ಸದರಿ ದಿನಾಂಕಃ **20-03-2012** ರಂದು ತೆಗೆದಿರುತ್ತಾರೆಂದು ಕಂಡು ಬರುವುದಿಲ್ಲ. ಅದೇ ರೀತಿ ದಿನಾಂಕ **22-05 -2009** ರಂದು ವಾರ್ಷಿಕ ಸಮನ್ವಯ ಸಭೆ ನಡೆದಿರುವ ಬಗ್ಗೆ ಮತ್ತು ವಾದಿಯು ಸಂಘದ ಕಾರ್ಯದರ್ಶಿ ಆಗಿರುವ ಬಗ್ಗೆ ನಮೂದಾಗಿದ್ದು ಆ ಬಗ್ಗೆ ಯಾವುದೇ ನಮೂದು ಇರುವುದಿಲ್ಲ.

**26.** ಅದೇರೀತಿ ಪ್ರತಿವಾದಿಯರು ಹಾಜರು ಪಡಿಸಿರುವ ದಾಖಲೆಗಳನ್ನು ದಿನಾಂಕಃ **24-06-2009** ರಂದು ವಿಶೇಷ ಸರ್ವ ಸದಸ್ಯರ ಸಭೆ ಬಗ್ಗೆ ದಾಖಲೆ ಆಗಿರುತ್ತದೆ. ಸದರಿ ದಾಖಲೆಯಲ್ಲಿಯೂ ಸಹಾ ವಾದಿ ಆ ಸದರಿ ಸಂಘದ ಸಂಚಾಲಕರು ಆಗಿರುವ ಬಗ್ಗೆ ನಮೂದಾಗಿರುತ್ತದೆ. ಮತ್ತು ದಿನಾಂಕಃ **25-10-2011** ರಂದು ಕಾರ್ಯಕಾರ್ರಿ ಸಂಘದಲ್ಲಿ ಆಗಿರುವ ಠರಾವು ಹಾಜರು ನೀಡಿದ್ದು ವಾದಿ ಗೋಪಾಲರವರನ್ನು ಸಂಘದ ಕಾರ್ಯದರ್ಶಿ ಹುದ್ದೆಯಿಂದ ಸಂಘದ ಸದಸ್ಯರನ್ನಾಗಿ ಮಾಡುವ ದಾಖಲೆಆಗಿರುತ್ತದೆ. ಸದರಿ ದಾಖಲೆಗೆ ಗೋಪಾಲ ರವರು ಸಹಾ ಸಹಿ ಮಾಡಿರುತ್ತಾರೆ. ಈ

ದಾಖಲೆಗಳನ್ನು ಗಮನಿಸಿದಾಗ ಮೇಲ್ನೋಟದಲ್ಲಿ ವಾದಿ ಹೇಳುವಂತೆ ಸದರಿ ದಾಖಲೆಗಳನ್ನು ತಿದ್ದುಪಡಿ ಮಾಡಿ ಮೋಸದಿಂದ ಸಂಘದ ಹೆಚ್ಚುವರಿ ಸದಸ್ಯರನ್ನು ನೇಮಕ ಮಾಡಲಾಗಿದೆ. ಸಂಘದ ಬೈಲಾವನ್ನು ತಿದ್ದುಪಡಿ ಮಾಡಲಾಗಿದೆಯೆಂದು ಕಂಡು ಬರುವುದಿಲ್ಲ ವಾದಿ ಗೋಪಾಲ ರವರು 2009 ವರ್ಷದಲ್ಲಿ ಸಂಘದಲ್ಲಿ ಕಾರ್ಯದರ್ಶಿ ಆಗಿದ್ದು ಅನಂತರ ಅವರನ್ನು ಸಂಘದ ಕಾರ್ಯಕಾರಿ ಮಂಡಳಿಯ ಸಭೆಗೆ ಸದಸ್ಯರನ್ನು ಮಾಡಿರುವ ಬಗ್ಗೆ ಕಂಡು ಬಂದಿರುವುದರಿಂದ ಪ್ರತಿವಾದಿಯರು ಮೋಸದಿಂದ ದಾಖಲೆಗಳನ್ನು ಸೃಷ್ಟಿಸಿಕೊಂಡಿರುವ ಬಗ್ಗೆ ವಿವರ ಇರುವುದರಿಂದ ಬಳಿಕ ಅಷ್ಟೆ ತಿಳಿಯಬೇಕಿರುವುದರಿಂದ ಅಂಶ 1 ರಿಂದ 3 ರನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

27. ಅಂಶ ನಂ. 4: ಅಂಶ 1 ರಿಂದ 3 ಕ್ಕೆ ನೀಡಿರುವ ವಿವರವಾದ ಚರ್ಚೆಯಿಂದ ಅವುಗಳಿಗೆ ನೀಡಿರುವ ವಿವರವಾದ ಕಾರಣದಿಂದ ಅಂಶ 4 ಕ್ಕೆ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

## ಆದೇಶ

- ಅರ್ಜಿದಾರರು ತಿಳಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 2 ಸಿಪಿಸಿ ಆದೇಶ 39 ನಿಯಮ 1 ಮತ್ತು 2 ನೇ ವಜಾಗೊಳಿಸಲಾಗಿದೆ.
- ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ

**(ಈ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನ ನೀಡಿ ಗಣಕೀಕರಿಸಿದ ನಂತರ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 19 ನೇ ಜುಲೈ ಮಾಹೆ 2019ರಂದು ಘೋಷಿಸಿರುತ್ತೇನೆ)**

( ಕೆ ಗೊಪಾಲ ಕೃಷ್ಣ ),
2 ನೇ ಹೆಚ್ಚುವರಿ ಸಿವಿಲ್ ಜಡ್ಜ ಮತ್ತು
ಪ್ರ. ದ. ನ್ಯಾ. ದಂ.ಅಥಣಿ.